**O.S. No**.32/2022 **PW** 1

ದಿನಾಂಕಃ 01.07.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ಮಾನ್ಯ ಸ.ಸ.ಅ ರವರಿಂದ ಃ

ನಾನು ಪದವೀಧರನಾಗಿದ್ದೇನೆ. ದಾವಾ ಆಸ್ತಿ ನನ್ನ ತಂದೆಯ ಹೆಸರಿನಲ್ಲಿದೆ. ವಾದ ಪತ್ರದಲ್ಲಿನ ಎಲ್ಲಾ ಮಾಹಿತಿ ನನಗೆ ಗೊತ್ತು. ಅಂದಗೇರಿ ಗ್ರಾಮದ ಸ.ನಂ. 57 ರ ಜಾಗ ಅರಣ್ಯ ಇಲಾಖೆಗೆ ಸೇರಿದ್ದು. ಸದರಿ ಸ.ನಂ. 57 ರ ಒಟ್ಟು ವಿಸ್ತೀರ್ಣ ಮತ್ತು ಚೆಕ್ಕುಬಂದಿ ನನಗೆ ಗೊತ್ತಿಲ್ಲ. ಸ.ನಂ. 57 ರ ಪೈಕಿ 34 ಎಕರೆ ಜಾಗವನ್ನು ಮೈಸೂರು ಪೇಪರ್ ಮಿಲ್ ನವರಿಗೆ ಸರ್ಕಾರದವರು ನೀಡಿದ್ದಾರೆ ಎಂದರೆ ಇರಬಹುದು. 1926 ರಲ್ಲಿ ಸ.ನಂ. 57 ರ ಜಮೀನು ಅರಣ್ಯ ವ್ಯಾಪ್ತಿಗೆ ಒಳಪಟ್ಟಿದೆ ಎಂದು ಸರ್ಕಾರವು ಅಧಿಸೂಚನೆ ಹೊರಡಿಸಿರುವ ವಿಚಾರ ನನಗೆ ಗೊತ್ತಿಲ್ಲ. ಸದರಿ 1926 ರ ಅಧಿಸೂಚನೆಯ ನಂತರ ಸ.ನಂ. 57 ರಲ್ಲಿ ಯಾರಿಗೂ ಭೂ ವಿತರಣೆ, ಪಕ್ಕ ಪೋಡಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 1927, 1969 ಮತ್ತು 1970 ರಲ್ಲಿ ಪೋಡಿ ದುರಸ್ತು ಆಗಿ ಸದರಿ ಸ.ನಂ. 57 ರಲ್ಲಿ ಸ.ನಂ. 85/2 ಎಂದು 7 ಎಕರೆ 8 ಗುಂಟೆ ಕ್ಷೇತ್ರವನ್ನು ಪ್ರತ್ಯೇಕಗೊಳಿಸಲಾಗಿದೆ ಎಂದು ನುಡಿಯುತ್ತಾರೆ.

ಸದರಿ ಪೋಡಿ ದುರಸ್ತಿನ ಕುರಿತು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ನಾನು ಹೇಳಿದಂತೆ ಯಾವುದೇ ಪೋಡು ದುರಸ್ತಿ ಆಗಿಲ್ಲ ಎಂದರೆ ಸರಿಯಲ್ಲ. ನಿಪಿ 9 ರಿಂದ 23 ರ ದಾಖಲೆಗಳು ಸ.ನಂ. 85 ರ ಜಾಗಕ್ಕೆ ಸಂಬಂಧಿಸಿದ ದಾಖಲೆಗಳು ಎಂದರೆ ಸರಿ. ನಿಪಿ 28 ಸ.ನಂ. 57 ರ ಜಮೀನಿನ ಆರ್ ಟಿ ಸಿ ಎಂದರೆ ಸರಿ. ನಿಪಿ 28 ರಲ್ಲಿ 45.8 ಎಕರೆ ಕಿರು ಅರಣ್ಯ ಪ್ರದೇಶ, 55 ಎಕರೆ ಸೊಪ್ಪಿನ ಬೆಟ್ಟ ಹಾಗು ೨ 70 ಎಕರೆ ತುಂಗಾ ಅರಣ್ಯ ಪ್ರದೇಶ ಅಂತ ಕಾಣಿಸಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ದಾಖಲೆಯು ದಾವಾ ಆಸ್ತಿಗೆ ಸಂಬಂಧಿಸಿದ ದಾಖಲೆ ಅಲ್ಲ ಎನ್ನುತ್ತಾರೆ. ದಾವಾ ಆಸ್ತಿಯಲ್ಲಿ ಅರಣ್ಯ ಭೂಮಿ ಸಹ ಸೇರಿಕೊಂಡಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಾವು ಅರಣ್ಯ ಭೂಮಿಯನ್ನು ಸಹ ಒತ್ತುವರಿ ಮಾಡಿ ಬಾಂದು ಕಲ್ಲುಗಳನ್ನು ಕಿತ್ತು ಹಾಕಿ ಟ್ರೆಂಚ್ ಅನ್ನು ತೆಗೆದಿದ್ದೇವೆ ಎನ್ನುವುದು ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ಟ್ರೆಂಚ್ ಗಳು

ತುಂಬಾ ಹಳೆಯ ಕಾಲದಿಂದಲೂ ಇದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗೆ ಸಂಬಂಧಿಸಿದಂತೆ ನಾನು ಸರ್ವೆ ದಾಖಲೆಗಳು ಮತ್ತು ಕಂದಾಯ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ದಾವಾ ಆಸ್ತಿಯ ಚೆಕ್ಕುಬಂದಿ ತೋರಿಸಲು ನಾನು ನಕ್ಷೆಯನ್ನು ಹಾಜರುಪಡಿಸಿದ್ದೇನೆ.

ಸ.ನಂ. 57 ರಲ್ಲಿರುವ ತುಂಬಾ ಎಸ್ ಎಫ್ ನ ಡಿ ಲೈನ್ ಅನ್ನು ಒತ್ತುವರಿ ಮಾಡಿ, ಬೇಲಿ ಹಾಕಿ ನಾನು ದಾವಾ ಆಸ್ತಿಯಲ್ಲಿ ಟ್ರಂಚ್ ಹೊಡೆದಿರುತ್ತೇವೆ ಎಂದರೆ ಸಾಕ್ಷಿಯು ನಾವು ಅಥವಾ ನಾವು ದಾವಾ ಆಸ್ತಿಯನ್ನು ಖರೀದಿ ಮಾಡಿದ ವ್ಯಕ್ತಿಗಳು ದಾವಾ ಆಸ್ತಿಯ ಸ್ವಾಧೀನಕ್ಕೆ ಬರುವ ಕಾಲಕ್ಕೆ ಯಾವುದೇ ಡಿ ಲೈನ್ ಬಂದಿರಲಿಲ್ಲ ಎಂದು ನುಡಿಯುತ್ತಾರೆ. ದಾವೆಯಲ್ಲಿ ಕೋರಿದಂತೆ ಯಾವುದೇ ಪರಿಹಾರಕ್ಕೆ ನಾನು ಅರ್ಹನಲ್ಲ ಎನ್ನುವುದು ಸರಿಯಲ್ಲ. ದಾವೆ ಹೂಡುವ ಮೊದಲು ಪ್ರತಿವಾದಿಯರಿಗೆ ನಾನು ನಿಯಮಾನುಸಾರ ಪೂರ್ವ ನೋಟಿಸ್ ಅನ್ನು ನೀಡಿಲ್ಲ. ಸಾಕ್ಷಿಯು ಮುಂದುವರೆದು ಸದರಿ ಪ್ರತಿವಾದಿಯರು ನಮಗೆ ನೋಟಿಸ್ ಅನ್ನು ನೀಡದೇ ದಾವಾ ಆಸ್ತಿಯಲ್ಲಿ ಅತಿಕ್ರಮ ಪ್ರವೇಶ ಮಾಡಿದ ಕಾರಣ ನಾನು ಈ ದಾವೆಯನ್ನು ಸಲ್ಲಿಸಿರುತ್ತೇನೆ. ನಾನು ಪ್ರತಿವಾದಿಯರರಿಗೆ ಪೂರ್ವ ನೋಟೀಸ್ ಅನ್ನು ನೀಡದೆ ಇರುವುದರಿಂದ ಮತ್ತು ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿ ಈ ದಾವೆಯನ್ನು ಸಲ್ಲಿಸಿರುವುದರಿಂದ ಸದರಿ ದಾವೆಯು ಊರ್ಜಿತವಾಗುವುದಿಲ್ಲ ಎನ್ನುವುದು ಸರಿಯಲ್ಲ. ನಾನು ಕಂದಾಯ ಇಲಾಖೆಯವರೊಂದಿಗೆ ಕೈ ಜೋಡಿಸಿ ದಾಖಲೆಗಳನ್ನು ಸೃಷ್ಟಿಸಿರುವುದರಿಂದ ನಾನು ಯಾವುದೇ ಪರಿಹಾರಕ್ಕೆ ಅರ್ಹಣನಲ್ಲ ಎನ್ನುವುದು ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ಹೇಳಿಕೆಗಳು ಸುಳ್ಳು ಎನ್ನುವುದು ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿಯಿದೆ.

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀರು ಮತ್ತು
ಪ.ದ.ನ್ಯಾ.ದಂಡಾಧಿಕಾರಿಗಳು, ತೀರ್ಥಹಳ್ಳಿ.